# ಹಿಜ್ರಾ ಸಮುದಾಯದ ರೇವತಿ ಆತ್ಮಕಥೆಯ ನೆರಳುಗಳ ಜಾಡು

**ಚಂದ್ರಕಲಾ ಹೆಚ್. ಆರ್.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಮಹಾರಾಣಿ ಕಲಾ ಕಾಲೇಜು
ಮೈಸೂರು.

**Article Link: https://aksharasurya.com/2024/04/chandrakala-h-r.php**

**DOI: https://doi.org/10.5281/zenodo.10929908**

## ABSTRACT:

ಕನ್ನಡದಲ್ಲಿ ಈಗೀಗ ಅನುವಾದಿತ ಆತ್ಮಕಥನಗಳ ಸಂಖ್ಯೆ ಹೆಚ್ಚುತ್ತಿವೆ. ಕನ್ನಡದ ಆತ್ಮಕಥನಗಳ ಮಾದರಿಗೆ ಇದೊಂದು ವಿಶಿಷ್ಟ ಸೇರ್ಪಡೆ ಏಕೆಂದರೆ ಬಹುಪಾಲು ಆತ್ಮಕಥನಗಳಿಗೆ ಆತ್ಮವಿರದೆ, ಆತ್ಮವಂಚನೆಯಿಂದ ಕೂಡಿರುತ್ತವೆ. ರೇವತಿಯ ಆತ್ಮಕಥೆ 'ಬದುಕು ಬಯಲು' ಕೃತಿಯಲ್ಲಿ ಬಾಲ್ಯದ ಅನುಭವಗಳ ಗಟ್ಟಿತನ ಮತ್ತು ಪ್ರಾಮಾಣಿಕತೆ ಬೆಳೆಯುತ್ತಾ, ಪಕ್ವವಾಗುತ್ತಾ ಸಾಗಿ ಈ ಲೋಕವನ್ನು ನ್ಯಾಯದ ಕಟಕಟೆಯಲ್ಲಿ ನಿಲ್ಲಿಸಿ ರೇವತಿಯ ಆತ್ಮಘನತೆಯನ್ನು ಹೆಚ್ಚಿಸುತ್ತದೆ. ಪರಮಾತ್ಮನನ್ನು ದರ್ಶಿಸುತ್ತದೆ. ದೇಹದ ಅಂಗಾಂಗಗಳ ಮೂಲಕ ಗಂಡು, ಹೆಣ್ಣು ಎಂದು ಗುರುತಿಸಲಾಗುತ್ತದೆ. ಬದುಕು ಗಂಡು–ಹೆಣ್ಣೆಂಬ ದ್ವಿಲಿಂಗದ ಸುತ್ತವೇ ಹೆಣೆದುಕೊಂಡಿದೆ. ಆದರೆ ಗಂಡಿನೊಳಗಿರುವ ಹೆಣ್ಣಿನ ಭಾವನೆ, ನಡವಳಿಕೆಯನ್ನು ಗುರುತಿಸುವುದು ಹೇಗೆಂಬ ಪ್ರಶ್ನೆಗೆ ಈ ಕೃತಿ ಉತ್ತರದಾಯಿಯಾಗಿದೆ. ರೂಪಿನಿಂದ ಗಂಡಾಗಿ ಹೆಣ್ಣಿನ ಭಾವನೆಗಳನ್ನು ಹೊಂದಿರುವ ಮೂರನೆಯ ವರ್ಗವೊಂದು ಸಮಾಜದಿಂದ ನಂಬರ್ 9, ಖೋಜಾ, ಚಕ್ಕಾ, ಹೆಣ್ಣಿಗ, ಹೆಣ್ಣುಡುಗ, ಹಿಜ್ರಾ ಎಂದೇ ಕರೆಯಲ್ಪಡುವ, ಪರಿಪೂರ್ಣ ಗಂಡಾಗದ, ಪರಿಪೂರ್ಣ ಹೆಣ್ಣಾಗದ ತೃತೀಯ ಲಿಂಗಿ ಸಮುದಾಯದ ದೈಹಿಕ, ಮಾನಸಿಕ ತುಮುಲಗಳು, ಸಂವೇದನೆಗಳು, ಲಿಂಗಪರಿವರ್ತನೆಯ ತೊಳಲಾಟಗಳು, ಕುಟುಂಬ, ಸಮಾಜದ ಕಟ್ಟುಪಾಡುಗಳು, ಆ ಸಮುದಾಯದ ಕಟ್ಟಳೆಗಳು, ಆ ಸಮುದಾಯದ ಜೀವನಕ್ರಮ, ಅಭ್ಯಾಸಗಳು, ಉಳಿವಿಗಾಗಿ ನಡೆಸುವ ಹೋರಾಟಗಳು, ಕಾನೂನಿನ ಅಸಮಾನತೆ, ಆಸ್ತಿ ಅಸಮಾನತೆ, ಉದ್ಯೋಗ, ಶಿಕ್ಷಣ, ವಸತಿ ಸಮಸ್ಯೆಗಳು, ಲೈಂಗಿಕತೆಯ ಪ್ರಶ್ನೆ ಮತ್ತು ದುರ್ಬಳಕೆ, ಆ ಸಮುದಾಯದ ಪರಿಭಾಷೆಗಳು, ಗಂಡಿನ ದೇಹದೊಳಗೆ ನಲುಗುವ ಹೆಣ್ಣು ಮತ್ತು ಹೆಣ್ತನದ ಅನಾವರಣ ಸೃಷ್ಟಿಸುವ ಸಂದಿಗ್ಧತೆಗಳನ್ನು ಈ ಆತ್ಮಕಥನ ಬಿಚ್ಚಿಡುತ್ತದೆ. ದ್ವಿಲಿಂಗವಲಯ ಈ ಸಮುದಾಯವನ್ನು ಮತ್ತು ಅವರ ನೋವನ್ನು ಅಮುಖ್ಯವೆಂದು ಪರಿಗಣಿಸಿ ಕೀಳರಿಮೆಯಿಂದ ನೋಡುತ್ತಿರುವಾಗ ಹಿಜ್ರಾ ಸಮುದಾಯದ ಸಂಕಟಗಳನ್ನು ತನ್ನೊಡಲಲ್ಲಿ ತುಂಬಿಕೊಂಡ ಪ್ರತಿನಿಧಿಯಾಗಿ ರೇವತಿಯ ಆತ್ಮಕತೆಯಿದೆ. ಈ ಅತ್ಮಕಥೆಯ ಕುರಿತ ಲೇಖನ ಆ ಸಮುದಾಯದವರ ಮೇಲೆ ನಾಗರೀಕ ವಲಯಕ್ಕಿದ್ದ ಕೆಟ್ಟ ಕುತೂಹಲವನ್ನು

ತಣಿಸುತ್ತದೆ ಮತ್ತು ಸಖೇದಾಶ್ಚರ್ಯವನ್ನು ಉಂಟುಮಾಡುವುದರೊಂದಿಗೆ ಪೂರ್ಣತ್ವದ ಪ್ರಶ್ನೆ ಮತ್ತು ಕೊರತೆಯನ್ನು ತುಂಬಿಸುವ ಪ್ರಯತ್ನವನ್ನು ಈ ಕೃತಿ ಮಾಡುವುದರಿಂದ ಇಂತಹ ಕೃತಿಯನ್ನು ಓದುವುದರ ಮೂಲಕ ತೃತೀಯ ಲಿಂಗಿಗಳ ಬದುಕಿನ ನಾನಾ ಮುಖಗಳನ್ನು ವಿಶ್ಲೇಷಿಸಬಹುದಾಗಿದೆ. ಕಾರಣ ಈ ಲೋಕದಲ್ಲಿ ಅಂಗವಿಕಲರಿಗೆ, ಬುದ್ದಿಮಾಂದ್ಯರಿಗೆ ಬದುಕುವ ಅವಕಾಶಗಳಿರುವಷ್ಟು ಈ ಸಮುದಾಯಕ್ಕಿಲ್ಲವೇನೊ ಎಂಬ ಕೊರಗಿನೊಂದಿಗೆ ತೀವ್ರಶೋಷಿತವಲಯ ಎಂಬ ತರ್ಕಕ್ಕೆ ಬರಬಹುದಾಗಿದೆ. ಆತ್ಮಕಥೆ ಬಿಚ್ಚಿಡುವ ಶೋಷಣೆ ಚಿಂತನಾರ್ಹವಾಗಿದೆ.

**KEYWORDS:**

ಹಿಜ್ರಾ, ಆತ್ಮಕಥೆ, ಬದುಕು ಬಯಲು, ಎ. ರೇವತಿ, ಅನುವಾದ, ದು. ಸರಸ್ವತಿ.

ಸೃಷ್ಟಿಯ ಜೀವರಹಸ್ಯಗಳನ್ನು ಬೇಧಿಸಿದಾಗ ಎರಡು ವರ್ಗಗಳು ಕಾಣಸಿಗುತ್ತವೆ. 1. ಮುಖ್ಯವರ್ಗ, 2. ಅಮುಖ್ಯವರ್ಗ. ಮುಖ್ಯವರ್ಗದಲ್ಲಿ ಮನುಷ್ಯವರ್ಗ, ಇದರಲ್ಲಿ ಗಂಡು ಹೆಣ್ಣಿನ ಬದುಕೇ ಕೇಂದ್ರಸ್ಥಾನ. ಅವರ ಹುಟ್ಟು–ಸಾವು, ಬಾಲ್ಯ–ಯೌವನ, ಸರಸ– ವಿರಸ, ಪ್ರೇಮ,ಕಾಮ, ನೋವು–ನಲಿವು, ಏಳು–ಬೀಳು, ದ್ವೇಷ–ಅಸೂಯೆಗಳೇ ತಾಂಡವವಾಡುತ್ತಾ, ಅವರ ಸಂವೇದನೆಗಳು, ತಲ್ಲಣಗಳು, ಸ್ಥಾನಮಾನಗಳ ತುಡಿತಗಳಲ್ಲಿಯೇ ಜೀವನಕ್ರಮ ಸಾಗುತ್ತಿದೆ. ಅಮುಖ್ಯವರ್ಗದಲ್ಲಿ ಸಸ್ಯ, ಪ್ರಾಣಿ, ಪಕ್ಷಿಗಳ ಜೀವಕ್ರಮವು ಪ್ರಾಣಿವಿಜ್ಞಾನಿಗಳ, ಸಸ್ಯವಿಜ್ಞಾನಿಗಳ ಅಧ್ಯಯನಕ್ಕಷ್ಟೇ ಸೀಮಿತಗೊಂಡಿದೆ.

ಕನ್ನಡದಲ್ಲಿ ಅನುವಾದಿತ ಆತ್ಮಕಥನಗಳು ಹೆಚ್ಚಾಗಿ ಬರುತ್ತಿವೆ. ನಳಿನಿ ಜಮೀಲಾ ಅವರ ಸೆಕ್ಸ್ ವರ್ಕರ್ ಒಬ್ಬಳ ಆತ್ಮಕಥನದ ನಂತರ ಹಿಜ್ರಾ ರೇವತಿಯ ಬದುಕಿನ ಆತ್ಮಕಥೆ ಇಂಗ್ಲಿಷಿನಲ್ಲಿ Truth about me a HIZRA LIFE STORY ಯನ್ನು ಕನ್ನಡಕ್ಕೆ ದು.ಸರಸ್ವತಿಯವರು ಅನುವಾದಿಸಿದ್ದಾರೆ. ಕನ್ನಡದ ಆತ್ಮಕಥನಗಳ ಮಾದರಿಗೆ ಇದೊಂದು ವಿಶಿಷ್ಟ ಸೇರ್ಪಡೆ ಏಕೆಂದರೆ ಬಹುಪಾಲು ಆತ್ಮಕಥನಗಳಿಗೆ ಆತ್ಮವಿರದೆ, ಆತ್ಮವಂಚನೆಯಿಂದ ಕೂಡಿರುತ್ತವೆ. ಬಾಲ್ಯದ ಅನುಭವಗಳು ಗಟ್ಟಿಯಾಗಿದ್ದು, ಪ್ರಾಮಾಣಿಕವಾಗಿದ್ದು ನಂತರ ತೆಳುವಾಗುವ ಸಾಧ್ಯತೆಗಳೇ ಹೆಚ್ಚು. ಆದರೆ ರೇವತಿಯ ಆತ್ಮಕಥೆಯಲ್ಲಿ ಬಾಲ್ಯದ ಅನುಭವಗಳ ಗಟ್ಟಿತನ ಮತ್ತು ಪ್ರಾಮಾಣಿಕತೆ ಬೆಳೆಯುತ್ತಾ, ಪಕ್ವವಾಗುತ್ತಾ ಸಾಗಿ ಈ ಲೋಕವನ್ನು ನ್ಯಾಯದ ಕಟಕಟೆಯಲ್ಲಿ ನಿಲ್ಲಿಸಿ ರೇವತಿಯ ಆತ್ಮಘನತೆಯನ್ನು ಹೆಚ್ಚಿಸುತ್ತದೆ. ಪರಮಾತ್ಮನನ್ನು

ದರ್ಶಿಸುತ್ತದೆ. ವೈದೇಹಿಯವರು ಮಹಿಳೆಗೆ ಆತ್ಮಕಥೆ ಧರ್ಮವಾಗಲಿ ಎನ್ನುವ ಹೇಳಿಕೆ ರೇವತಿಯ ಆತ್ಮಕಥನಕ್ಕೆ ಹೊಂದುತ್ತದೆ.

ತೃತೀಯಲಿಂಗಿಗಳನ್ನು ಕುರಿತ ದೇಹರೂಪಕ್ಕೆ ಪುರಾಣದಲ್ಲಿ ಶಿವನನ್ನು ಅರ್ಧನಾರೀಶ್ವರನೆಂದು ಪೂಜಿಸುವುದನ್ನು ಗಮನಿಸಿದರೆ ಈ ಸಮುದಾಯದವರು ಶಿವಸ್ವರೂಪಿಗಳೇ ಎಂಬ ಜಿಜ್ಞಾಸೆ ಹುಟ್ಟುತ್ತದೆ. ಮಹಾಭಾರತದಲ್ಲಿ ಶಿಖಂಡಿಯ ಕತೆಯೂ ಈ ಸಮುದಾಯವನ್ನೇ ಪ್ರತಿನಿಧಿಸುವಂತಹದು. ಪುರಾಣಾಧಾರಿತ ಹಿನ್ನೆಲೆಯ ತೃತೀಯಲಿಂಗಿಗಳನ್ನು ಯಾಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಮೂಲಭೂತ ಸವಲತ್ತುಗಳು ಕೇವಲ ಸ್ತ್ರೀ–ಪುರುಷರಿಗೆ ಸೀಮಿತವೇ? ಅವರನ್ನು ಪ್ರಜೆಗಳೆಂದು ಭಾವಿಸಬಾರದೇ? ಪಾಸ್ ಪೋರ್ಟ್, ರೇಷನ್ ಕಾರ್ಡ್, ಮತದಾನದ ಹಕ್ಕಿಲ್ಲವೇ? ಆಸ್ತಿಯ ಹಕ್ಕಿಲ್ಲವೇ ಡ್ರೈವಿಂಗ್ ಲೈಸೆನ್ಸ್ ಬೇಡವೇ ಈ ಬಗೆಯ ನಿರ್ಲಕ್ಷ್ಯಧೋರಣೆಗಳಿಗೆ ಈ ಆತ್ಮಕಥೆ ಪ್ರಶ್ನೋತ್ತರದ ಸರಮಾಲೆಯನ್ನೇ ಹೆಣೆಯುತ್ತದೆ.

ದೇಹದ ಅಂಗಾಂಗಗಳ ಮೂಲಕ ಗಂಡು, ಹೆಣ್ಣು ಎಂದು ಗುರುತಿಸಲಾಗುತ್ತದೆ. ಬದುಕು ಗಂಡು–ಹೆಣ್ಣೆಂಬ ದ್ವಿಲಿಂಗದ ಸುತ್ತವೇ ಹೆಣೆದುಕೊಂಡಿದೆ. ಆದರೆ ಗಂಡಿನೊಳಗಿರುವ ಹೆಣ್ಣಿನ ಭಾವನೆ, ನಡವಳಿಕೆಯನ್ನು ಗುರುತಿಸುವುದು ಹೇಗೆಂಬ ಪ್ರಶ್ನೆಗೆ 12ನೇ ಶತಮಾನದ ವಚನಕಾರರು ಮೊಲೆ ಮೂಡಿ ಬಂದರೆ ಹೆಣ್ಣೆಂಬರು. ಮೀಸೆಮೂಡಿ ಬಂದರೆ ಗಂಡೆಂಬರು, ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಆ ಶತಮಾನದಲ್ಲಿನ ವಚನವೊಂದರಲ್ಲಿ ಲಿಂಗಬೇಧವಿರದ ಆತ್ಮದ ಸ್ವರೂಪವನ್ನು ಚರ್ಚಿಸುವ ಕಾಲಘಟ್ಟದಲ್ಲಿ ತೃತೀಯ ಲಿಂಗಿಗಳನ್ನು ಸಮೀಕರಿಸಿದಂತಿದೆ. ರೂಪಿನಿಂದ ಗಂಡಾಗಿ ಹೆಣ್ಣಿನ ಭಾವನೆಗಳನ್ನು ಹೊಂದಿರುವ ಮೂರನೆಯ ವರ್ಗವೊಂದು ಸಮಾಜದಿಂದ ನಂಬರ್ 9, ಖೋಜಾ, ಚಕ್ಕಾ, ಹೆಣ್ಣಿಗ, ಹೆಣ್ಣುಡುಗ, ಹಿಜ್ರಾ ಎಂದೇ ಕರೆಯಲ್ಪಡುವ, ಪರಿಪೂರ್ಣ ಗಂಡಾಗದ, ಪರಿಪೂರ್ಣ ಹೆಣ್ಣಾಗದ ತೃತೀಯ ಲಿಂಗಿ ಸಮುದಾಯದ ದೈಹಿಕ, ಮಾನಸಿಕ ತುಮುಲಗಳು, ಸಂವೇದನೆಗಳು, ಲಿಂಗಪರಿವರ್ತನೆಯ ತೊಳಲಾಟಗಳು, ಕುಟುಂಬ, ಸಮಾಜದ ಕಟ್ಟುಪಾಡುಗಳು, ಆ ಸಮುದಾಯದ ಕಟ್ಟಳೆಗಳು, ಆ ಸಮುದಾಯದ ಜೀವನಕ್ರಮ, ಅಭ್ಯಾಸಗಳು, ಉಳಿವಿಗಾಗಿ ನಡೆಸುವ ಹೋರಾಟಗಳು, ಕಾನೂನಿನ ಅಸಮಾನತೆ, ಆಸ್ತಿ ಅಸಮಾನತೆ, ಉದ್ಯೋಗ, ಶಿಕ್ಷಣ, ವಸತಿ ಸಮಸ್ಯೆಗಳು, ಲೈಂಗಿಕತೆಯ ಪ್ರಶ್ನೆ ಮತ್ತು ದುರ್ಬಳಕೆ, ಆ ಸಮುದಾಯದ ಪರಿಭಾಷೆಗಳು, ಗಂಡಿನ ದೇಹದೊಳಗೆ ನಲುಗುವ ಹೆಣ್ಣು ಮತ್ತು ಹೆಣ್ತನದ ಅನಾವರಣ ಸೃಷ್ಟಿಸುವ ಸಂದಿಗ್ಧತೆಗಳನ್ನು ಈ ಆತ್ಮಕಥನ ಬಿಚ್ಚಿಡುತ್ತದೆ. ದ್ವಿಲಿಂಗವಲಯ ಈ ಸಮುದಾಯವನ್ನು ಮತ್ತು ಅವರ

ನೋವನ್ನು ಅಮುಖ್ಯವೆಂದು ಪರಿಗಣಿಸಿ ಕೀಳರಿಮೆಯಿಂದ ನೋಡುತ್ತಿರುವಾಗ ಹಿಜ್ರಾ ಸಮುದಾಯದ ಸಂಕಟಗಳನ್ನು ತನ್ನೊಡಲಲ್ಲಿ ತುಂಬಿಕೊಂಡ ಪ್ರತಿನಿಧಿಯಾಗಿ ರೇವತಿಯ ಆತ್ಮಕತೆಯಿದೆ. ಈ ಅತ್ಮಕಥೆಯ ಕುರಿತ ಲೇಖನ ಆ ಸಮುದಾಯದವರ ಮೇಲೆ ನಾಗರೀಕ ವಲಯಕ್ಕಿದ್ದ ಕೆಟ್ಟ ಕುತೂಹಲವನ್ನು ತಣಿಸುತ್ತದೆ ಮತ್ತು ಸಖೇದಾಶ್ಚರ್ಯವನ್ನು ಉಂಟುಮಾಡುವುದರೊಂದಿಗೆ ಪೂರ್ಣತ್ವದ ಪ್ರಶ್ನೆ ಮತ್ತು ಕೊರತೆಯನ್ನು ತುಂಬಿಸುವ ಪ್ರಯತ್ನವನ್ನು ಈ ಕೃತಿ ಮಾಡುವುದರಿಂದ ಇಂತಹ ಕೃತಿಯನ್ನು ಓದುವುದರ ಮೂಲಕ ತೃತೀಯ ಲಿಂಗಿಗಳ ಬದುಕಿನ ನಾನಾ ಮುಖಗಳನ್ನು ವಿಶ್ಲೇಷಿಸಬಹುದಾಗಿದೆ. ಕಾರಣ ಈ ಲೋಕದಲ್ಲಿ ಅಂಗವಿಕಲರಿಗೆ, ಬುದ್ಧಿಮಾಂದ್ಯರಿಗೆ ಬದುಕುವ ಅವಕಾಶಗಳಿರುವಷ್ಟು ಈ ಸಮುದಾಯಕ್ಕಿಲ್ಲವೇನೊ ಎಂಬ ಕೊರಗಿನೊಂದಿಗೆ ತೀವ್ರಶೋಷಿತವಲಯ ಎಂಬ ತರ್ಕಕ್ಕೆ ಬರಬಹುದಾಗಿದೆ. ಆತ್ಮಕಥೆ ಬಿಚ್ಚಿಡುವ ಶೋಷಣೆ ಚಿಂತನಾರ್ಹವಾಗಿದೆ.

ಜೀವನ ತೂಗುವುದು ಎರಡು ವರ್ಗದ ನಡುವೆ. ಒಂದು ಮೊಲೆ ಮೂಡಿದ ಹೆಣ್ಣುಗಳು. ಮೀಸೆ ಮೂಡಿದ ಗಂಡುಗಳು. ಎರಡೂ ವರ್ಗದ ಹೊರತಾದ ಗಂಡಾಗಿ ಹುಟ್ಟಿ , ಲಿಂಗಪರಿವರ್ತನೆಗೊಂಡು ಮೊಲೆಮೂಡಿಸಿಕೊಂಡು ನಲಿದ ಹೆಣ್ಣು ರೇವತಿ. ಮುನುಷ್ಯನ ಹೊರರೂಪಕ್ಕಿಂತ ಒಳರೂಪವೇ ಮುಖ್ಯ. ಒಳಗನ್ನು ಹೊರಗಿನಿಂದ ಸಾಧಿಸಿಕೊಳ್ಳುವುದು ಅಸಾಮಾನ್ಯವಾದುದು. ಹೀಗೆ ಬದುಕುವವರೇ ತೃತೀಯಲಿಂಗಿಗಳು. ಹುಟ್ಟಿನಿಂದ ಗಂಡಾದ ತಮಿಳುನಾಡು ಮೂಲದ ನಮಕ್ಕಲ್ ಹಳ್ಳಿಯ (ದೊರೈಸ್ವಾಮಿ) ಹೆಣ್ಣಿನ ವೇಷಭೂಷಣದ ಮೇಲಿನ ಆಸಕ್ತಿ, ನಡಿಗೆ, ಹಾವಭಾವ, ಅಡುಗೆಯ ಆಸಕ್ತಿ, ಸ್ತ್ರೀಸಂಬಂಧಿತ ಮನೋಧೋರಣೆಗಳು, ವಿಷಯಾಸಕ್ತಿಗಳ ಕಡೆಗೆ ವಾಲುವ ದೊರೈಸ್ವಾಮಿ ಲಿಂಗಪರಿವರ್ತನೆಯ ಮೂಲಕ ರೇವತಿಯಾಗುವಳು. ತನ್ನ ಸಮುದಾಯದವರೊಂದಿಗೆ ಬದುಕಬೇಕೆಂಬ ಒಳಗಿನ ತುಡಿತಕ್ಕೆ ಹೆತ್ತವರನ್ನು ದೂರೀಕರಿಸಿ ತನ್ನವರ ನೆಲೆಗಳಾದ ದೆಹಲಿ, ಮುಂಬೈ, ಬೆಂಗಳೂರಿನಂತಹ ಮಹಾನಗರಗಳಲ್ಲಿ ವಾಸಿಸಲು ಲಿಂಗಪರಿವರ್ತನೆಗೊಂಡು, ಹಿಜ್ರಾ ಸಂಪ್ರದಾಯಗಳನ್ನೆಲ್ಲಾ ಪಾಲಿಸಿಕೊಂಡು,ಆ ಸಮುದಾಯದ ವೃತ್ತಿಯನ್ನು ಒಗ್ಗಿಸಿಕೊಂಡು, ತನ್ನೊಳಗಿನ ಕಾಮಾಸಕ್ತಿಗೆ ಸೆಕ್ಸ್ ವರ್ಕರ್ ಆಗುವ ಮೂಲಕ ಅನುಭವಿಸುವ ಸಂಕಟಗಳ ಸರಮಾಲೆಯ ಈ ದಾರುಣಗಾಥೆ ಮೈನವಿರೇಳಿಸುತ್ತದೆ ಮತ್ತು ವ್ಯವಸ್ಥೆಯನ್ನು ಆಕ್ರೋಶಿಸುವಂತೆ ಮಾಡುತ್ತದೆ.ಕಾರಣ ಈ ಪುರುಷಲೋಕ ಪರಿಪೂರ್ಣ ಹೆಣ್ಣನ್ನೂ, ಪರಿವರ್ತಿತ ಹೆಣ್ಣನ್ನು ಶೋಷಣೆಯ ಒಂದೇ ತಕ್ಕಡಿಯಲ್ಲಿ ತೂಗುವುದು ವಿಪರ್ಯಾಸ.

ಈ ಆತ್ಮಕಥೆ ಸಾಗುವ ಕಥನಮಾದರಿಯೂ ಅಷ್ಟೇ ವಿಶಿಷ್ಟವಾಗಿದೆ. ಓದುತ್ತಾ

ಕುಳಿತರೆ ದೊರೈಸ್ವಾಮಿ ಕರಗಿ ರೇವತಿಯಾಗುವುದು. ಎಂದೂ ದೊರೈಸ್ವಾಮಿಯಾದಂತೆ ಕಾಣಿಸುವುದಿಲ್ಲ. ಅವಳನ್ನು ಶೋಷಿಸುವ ಜಗತ್ತನ್ನು ದೂಷಿಸುವ ಕಿಚ್ಚು ಹುಟ್ಟುತ್ತದೆ. ರೇವತಿಯಾಗಿ ಅವಳು ಸಂಪಾದಿಸಿದ್ದು ಆತ್ಮತೃಪ್ತಿಯಷ್ಟೇ. ಅವಳಾಗುವುದಕ್ಕೆ ಪಟ್ಟಪಾಡು, ಅವನೇ ಆಗಿ ಉಳಿದಿದ್ದರೆ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ನಾಗರೀಕ ಜಗತ್ತಿನ ಮೇಲೆ ಜಿಗುಪ್ಸೆ ಹುಟ್ಟುತ್ತದೆ. ಹಿಜಡಾ ಲೋಕದ ಮೇಲಿನ ಪೂರ್ವಾಗ್ರಹಗಳನ್ನೂ, ಜಿಗುಪ್ಸೆಗಳನ್ನು ಕಳಚುವ ಸಶಕ್ತತೆ ಈ ಅನುವಾದಕ್ಕಿರುವುದು ಸತ್ಯ. ಈ ಸಮುದಾಯದವರನ್ನು ಮನುಷ್ಯರಂತೆ ನಡೆಸಿಕೊಳ್ಳಬೇಕಾದ ಜರೂರು ಎಲ್ಲ ನಾಗರೀಕರಿಗೆ ಮತ್ತು ಸರ್ಕಾರಕ್ಕಿರಲೇಬೇಕಾದ ಅನಿವಾರ್ಯತೆಯನ್ನು ಈ ಕೃತಿ ಸೃಷ್ಟಿಸಿದೆ. ಅಲ್ಲದೆ ಈ ಕೃತಿಯ ಮೂಲಕ ಹಿಜಡಾಗಳ ನೋಡುವಿಕೆಯ ಕ್ರಮವನ್ನು, ತಿಳುವಳಿಕೆಯನ್ನು ಮೂಡಿಸುತ್ತದೆ. ಈ ಸಮುದಾಯದ ಮೇಲೆ ನಾವಿಟ್ಟಿದ್ದ ತಪ್ಪುಕಲ್ಪನೆಗಳನ್ನು, ತಪ್ಪು ತಿಳುವಳಿಕೆಯನ್ನು ಮುರಿದು ಕಟ್ಟುವಂತಿದೆ.

ದೊರೈಸ್ವಾಮಿ ರೇವತಿಯಾದ ದಾರಿ ಗಾಜಿನ ಚೂರುಗಳ ಹಾಸು ಮೇಲಿನ ನಡಿಗೆ. ಹೆಣ್ಣಾಗಬೇಕೆಂಬ ಅವಳ ಮನೋಧರ್ಮವೇನೂ ಸ್ವರ್ಗತಂದುಕೊಡುವುದಿಲ್ಲವಾದರೂ ಆತ್ಮತೃಪ್ತಿಯ ಲಾಭವಷ್ಟೇ, ತನ್ನ ಕುಟುಂಬದವರ ಹೊರತಾಗಿ ಯಾರಾದರು ದೊರೈಸ್ವಾಮಿ ಎಂದರೆ ಕಿಡಿಕಾರುತ್ತಾಳೆ. ಕಾಮುಕ ರಿಂದ ತನ್ನೊಳಗಿನ ಲೈಂಗಿಕಾಸಕ್ತಿಯನ್ನು ತಣಿಸಿಕೊಳ್ಳಲು, ಹೊಟ್ಟೆಪಾಡಿಗಾಗಿ ಆ ಸಮುದಾಯದವರು ತೊಡುವ ವೇಷ, ಲಿಂಗಪರಿವರ್ತಿತ ಅಂಗಗಳನ್ನು ಪರೀಕ್ಷಿಸಲು ಲಾಠಿ ತೂರಿಸುವ ಪೋಲಿಸ್ ವ್ಯವಸ್ಥೆಯ ಕ್ರೌರ್ಯ ನಾಚಿಕೆಯೆನಿಸುತ್ತದೆ. ಎದೆಯಾಳದ ನಿಜಪ್ರೀತಿಗಾಗಿ ಹಾತೊರೆದು ಪುರುಷನೊಬ್ಬನನ್ನು ಪ್ರೀತಿಸಿ ಮದುವೆಯಾಗಿ ಸುಖೀ ದಾಂಪತ್ಯದ ಕನಸು ನನಸಾದ ಬೆನ್ನಲ್ಲೇ ಅವನಿಂದಲೇ ಮೋಸಹೋಗುವ ದುಃಖಾಂತ್ಯದ ಸಂದರ್ಭಗಳು ನಿಜಹೆಣ್ಣಿನ ಜೀವನದ ಸಂಗತಿಗಳಂತೆನಿಸುತ್ತದೆ. ಪರಿಪೂರ್ಣ ಹೆಣ್ಣಿನ ಮೇಲೆ ನಡೆಯುವಷ್ಟೇ ಅಮಾನವೀಯ ಸಂದರ್ಭಗಳು ಈ ಸಮುದಾಯದ ಮೇಲೂ ನಡೆಯುವ ಸೂಕ್ಷ್ಮತೆಗಳನ್ನು ರೇವತಿಯ ಕಥ ನ ಬಯಲುಗೊಳಿಸುತ್ತದೆ. ಬಸ್ ಸ್ಟಾಂಡ್ , ರೈಲುಗಳಲ್ಲಿ, ಅಂಗಡಿಗಳಲ್ಲಿ ಹಣ ಎತ್ತುವ ಹಿಜಾಡಗಳನ್ನು ನೋಡಿ ತಪ್ಪು ತಿಳುವಳಿಕೆಯನ್ನು ರೂಪಿಸಿಕೊಂಡಿರುವ ನಮಗೆ ಅಲ್ಲಿನ ಶೋಷಣೆಯ ಬೇರುಗಳನ್ನು ಪರಿಚಯಿಸುವ ಈ ಕಥನ ನಮ್ಮ ಪೂರ್ವಾಗ್ರಹದ ಮೂಲಬೇರನ್ನು ಅಲುಗಾಡಿಸುತ್ತದೆ.

ಮೂರುಜನ ಅಣ್ಣಂದಿರು, ಒಬ್ಬ ಅಕ್ಕನ ಮುದ್ದಿನ ತಮ್ಮನಾದ ದೊರೈಸ್ವಾಮಿಯ ಕುಟುಂಬ ಆರ್ಥಿಕವಾಗಿ ಉತ್ತಮವಾಗಿದ್ದರೂ ಗಂಡಾಗಿದ್ದ ದೊರೈಸ್ವಾಮಿ ತನ್ನೊಳಗೆ ಹೆಣ್ಣಿನ ಅರಳುವಿಕೆಯ ಲಕ್ಷಣಗಳಿಂದ ಬಲಗೊಂಡು.ಹೆಣ್ಣಾಗುವ ಕನಸುಗಳು

ಖುಷಿಕೊಟ್ಟ ಸಂದರ್ಭಗಳಿಂದ ತನ್ನೊಳಗೆ ಲಿಂಗಬೇಧವೊಂದು ಹುಟ್ಟುತ್ತಾ, ತನ್ನತನದ ಸಾಬೀತಿಗೆ ಬಾಹ್ಯರುಜುವಾತು ಒಂದೆಡೆಯಾದರೆ, ಅವನತ್ವ,ಅವಳತ್ವದ ಸಾಬೀತಿಗೆ ಹೆಣ್ಣಂತೆ ಸಾರಿಸಿ ರಂಗೋಲಿ ಹಾಕುವ, ಹಿಜ್ರಾ ಸಮುದಾಯದೊಡನೆ ಬೆರೆಯುವ, ನಾಟಕದಲ್ಲಿ ಹೆಣ್ಣುಪಾತ್ರಗಳನ್ನು ಅಭಿನಯಿಸುವ ಮೂಲಕ ತನ್ನದಲ್ಲದ ವ್ಯಕ್ತಿತ್ವವನ್ನು ಹೇಗೆ ರೂಪಿಸಿಕೊಳ್ಳುತ್ತಾಳೆ ? ಬಾಹ್ಯಪ್ರಪಂಚ ಈ ಬದಲಾವಣೆಗಳನ್ನು ಹೇಗೆ ಸ್ವೀಕರಿಸುತ್ತದೆ? ಮತ್ತು ನಿರಾಕರಿಸುತ್ತದೆ? ವ್ಯವಸ್ಥೆ ಪರಿಪೂರ್ಣ ಹೆಣ್ಣನ್ನು ಮತ್ತು ಗಂಡನ್ನು ಸ್ವೀಕರಿಸುತ್ತದೆಯೇ ಹೊರತು ಮೂರನೇ ವರ್ಗದ ವ್ಯಕ್ತಿತ್ವವನ್ನು, ಮನೋಧರ್ಮವನ್ನು ಅಣಕಿಸುತ್ತದೆ. ದೇವಿಜಾತ್ರೆಗೆ ಹೆಣ್ಣು ವೇಷ ತೊಟ್ಟು ಕುಟುಂಬದ ಭಯದೊಂದಿಗೆ ನಲಿಯುವ ರೇವತಿಯ ಒಳತುಡಿತಕ್ಕೆ ದನಿಯಾಗುವ ಕನ್ನಡಿ ಹೆಣ್ಣಾಗುವುದಕ್ಕೆ ಸಿಗುವ ರೋಮಾಂಚನದ ತೀವ್ರತೆ ಹೆಚ್ಚೇ ಇದೆ. ಗಂಡು ಹೆಣ್ಣಾಗಲು ಪಡುವ ಪಾಡು ಅಷ್ಟಿಷ್ಟಲ್ಲ. ಹಣ ಕದಿಯುವುದು, ಶಾಲೆಯಿಂದ ಹೊರಗುಳಿಯುವುದು ಹೆಣ್ತನ್ ಉಳಿವಿಗಾಗಿ ನಡೆಸುವ ಹೋರಾಟ. ಶಸ್ತ್ರಚಿಕಿತ್ಸೆಯ ಮೂಲಕ ಹೆಣ್ಣಾಗುವ ಪ್ರಕ್ರಿಯೆಯೂ ಕ್ಲಿಷ್ಟವಾದದ್ದು. ಅಲ್ಲಿಯವರೆಗೂ ಹಿರಿಯ ಹಿಜಡಾಗಳ ಚೇಲಾ ಆಗಿ ಮುಂದುವರಿಯಬೇಕು. ಪರಿವರ್ತಿತ ಹೆಣ್ಣಿಗಷ್ಟೇ ಹಿಜಡಾಸಮುದಾಯದಲ್ಲಿ ಬೆಲೆ. ಸೆಕ್ಸ್ ಗೆ, ಭಿಕ್ಷೆಗಾಗಿ, ಪುರುಷರೊಂದಿಗೆ ಸಂಪರ್ಕಬೆಲೆಸುವ ಅವಕಾಶ ಇತ್ಯಾದಿಗಳು ಸಿಗುವಂತಹದ್ದು.ಆಪರೇಷನ್ ಆದವರಿಗೆ ಎದುರಾಗುವ ಶೌಚಾಲಯದ ಸಮಸ್ಯೆ, ನಡಿಗೆಯ ವ್ಯತ್ಯಯ,ಹೊಟ್ಟೆನೋವು , ಇವರ ಶಸ್ತ್ರಕ್ರಿಯೆಯಲ್ಲೂ ಎರಡುವಿಧ. ಡಾಕ್ಟರ್ ಆಪರೇಷನ್, ತಾಯವ್ವನ ಆಪರೇಷನ್.ತಾಯವ್ವನ ಆಪರೇಷನ್ ಒಂದು ರೀತಿಯ ಪದವಿರಹಿತ, ಅನುಭವಾಧಾರಿತ ಶಸ್ತ್ರಚಿಕಿತ್ಸಕಿ.ಹೆಣ್ಣಾಗದ, ಗಂಡಾಗದ ಹೆಣ್ಣಿನಂತಾಗುವವರ ಬಾಳು ನರಕವೆಂಬ ಸತ್ಯದರ್ಶನ ಈ ಆತ್ಮಕಥೆಯಲ್ಲಿದೆ. ಆಪರೇಷನ್ ನಂತರದಲ್ಲಿ ಪಾಲಿಸಬೇಕಾದ ನಿಯಮಗಳು, ಶೌಚಾಲಯದಲ್ಲಿ, ಪ್ರಯಾಣದಲ್ಲಿ ಎದುರಿಸುವ ಅವಹೇಳನಕಾರಿ ಮಾತುಗಳು, ಕನ್ನಡಿಯಲ್ಲಿ ನೋಡಬಾರದು, ಗಂಡಸರನ್ನು ನೋಡಬಾರದು, ತಲೆಬಾಚಬಾರದು ಈ ಎಲ್ಲಾ ಕಟ್ಟಳೆಗಳು ಹೆಣ್ಣಾಗುವುದು ಸುಲಭವಲ್ಲ ಎಂಬುದನ್ನು ಧ್ವನಿಸುತ್ತದೆ.

ಚೇಲಾ ನಿಯಮಗಳು : ಚೇಲಾ ಎಂದರೆ ಈ ಸಮುದಾಯದ ಹಿರಿಯಳ ಮಗಳಾಗುವುದು. ಸಂಪಾದಿಸಿ ಹಣವನ್ನು ಇವರ ಕೈಗಿಡುವುದು. ಇವರನ್ನು ಚೇಲಾಗುರು ನೋಡಿಕೊಳ್ಳುತ್ತಾರೆ. ಲೇಖಕಿ ರೇವತಿ ಮೂರು ಸಂದರ್ಭಗಳಲ್ಲಿ ಚೇಲಾ ಆಗುತ್ತಾರೆ.ಮೊದಲು ಹೆಣ್ತನದ ತುಡಿತಕ್ಕಾಗಿ, ಎರಡನೆಯದು ನಿರ್ವಾಣ ಕ್ಕಾಗಿ(ಶಸ್ತ್ರಚಿಕಿತ್ಸೆ) ಮೂರನೆಯದು ವೇಶ್ಯಾವೃತ್ತಿ ಅಥವಾ ಲೈಂಗಿಕಸುಖಕ್ಕಾಗಿ. ಚೇಲಾಗಳನ್ನು ಬದಲಾಯಿಸಿದರೆ ಹಿಂದಿನ ಗುರುವಿಗೆ ಹೊಸಗುರು ಕಾಣಿಕೆಕೊಡಬೇಕು.

ಮತ್ತು ಜಮಾತ್ ನಲ್ಲಿ ಈ ವಿಷಯವನ್ನು ಬಹಿರಂಗಪಡಿಸಬೇಕು. ಎಷ್ಟು ಬಾರಿ ಬೇಕಾದರೂ ಚೇಲಾಗಳು ಗುರುಭಾಯಿಗಳನ್ನು ಬದಲಾಯಿಸಬಹುದು.

ಲೇಖಕಿ ರೇವತಿ ಆತ್ಮಕಥೆಯ ಬರಹಕಾಲಕ್ಕೆ ಈ ಸಮುದಾಯಕ್ಕೆ ಅಷ್ಟು ಕಾನೂನಿನ ಬೆಂಬಲವಿರಲಿಲ್ಲ. ರಕ್ಷಣೆ ಬಹುದೊಡ್ಡ ಸವಾಲಾಗಿತ್ತು. ಲಿಂಗಪರಿ ವರ್ತನೆಯನ್ನು ಸಮಾಜಕ್ಕೆ ಮಾನ್ಯವೆಂದು ಸಾಬೀತುಪಡಿಸಿದ ರೇವತಿ ವೇಷಕ್ಕೂ, ಪೋಷಾಕಿಗೂ ಇರುವ ಅಂತರವನ್ನು ವಿವರಿಸಿದ್ದಾರೆ. ವೇಷ ಗಂಡಿನದಾಗಿ, ಒಳಪೋಷಾಕು ಹೆಣ್ಣಿನದಾಗಿ, ಗಂಡಿನ ವೇಷದೊಳಗಿನ ಹೆಣ್ಣು ಹೆಣ್ಣಾಗದೆ, ಪರಿವರ್ತಿತ ಹೆಣ್ಣಾಗಿ ಗಂಡಿನ ಚಟಗಳನ್ನು ಅಂಟಿಸಿಕೊಂಡು ಗಂಡನ್ನೆ ಕಾಮಾಸಕ್ತಿಗಾಗಿ ಬಳಸಿಕೊಳ್ಳುವುದು ಸೋಜಿಗವೇಸರಿ.

ಸಂಕೇತಗಳು: ಚಪ್ಪಾಳೆ ತಟ್ಟುವುದು, ಪುರುಷರ ಕೆನ್ನೆ ಸವರುವುದು,ಕಣ್ಣು ಮಿಟುಕಿಸುವುದು, ಅತೃಪ್ತ ಪುರುಷರ ದಾಹವನ್ನು ತಣಿಸುವುದು. ಸೆರಗು ಜಾರಿಸಿ ಓಡಾಡುವುದು.

ಆರ್ಥಿಕಾಂಶಗಳು: ಸೆಕ್ಸ್ ದಂಧೆಯಲ್ಲಿ ನೂರು, ಇನ್ನೂರು ಸಂಪಾದಿಸಿ ಗುರು ಭಾಯಿಗೆ ನೀಡಬೇಕು. ತಂದೆ ತಾಯಿಗಳನ್ನು ಪೋಷಿಸಬೇಕು. ಗಂಡುಮಗನಂತೆ ಸಂಪೂರ್ಣ ಆಸಿಯಲ್ಲಿ ಸಮಪಾಲಾಗಲಿ, ಹೆಣ್ಣುಮಗಳಂತೆ ಭಾಗಶಃ ಪಾಲಾಗಲಿ ದಕ್ಕದೆ ಕರುಣಾಧಾರಿತ ಹಣವನ್ನು ಪಡೆದು ಜೀವಿಸಬೇಕು.ಅಂಗಡಿಗಳಲ್ಲಿ, ದೇವಾಲಯಗಳಲ್ಲಿ ನರ್ತಿಸಿ ತಂದಹಣದಿಂದ ಬದುಕನ್ನು ನಡೆಸಬೇಕು.

ಲೇಖಕಿ ರೇವತಿ ಪ್ರತಿಭಾವಂತೆ. ಸಂಗಮದಂತಹ ಸಂಸ್ಥೆಯಲ್ಲಿ (ಲೈಂಗಿಕ ಅಲ್ಪಸಂಖ್ಯಾತರಿಗೆ ಒತ್ತಾಸೆಯಾಗಿರುವ ಸಂಸ್ಥೆ) ಕೆಲಸ ಗಿಟ್ಟಿಸಿಕೊಂಡು ತನ್ನ ವೈಚಾರಿಕ, ಬೌದ್ಧಿಕ ಪ್ರತಿಭೆಗಳಿಂದ ವೇದಿಕೆಯಲ್ಲಿ ಭಾಷಣಮಾಡುವ ಅಲಕ್ಷಿತಸಮುದಾಯದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ನಿಟ್ಟಿನಲ್ಲಿ ದುಡಿಯುವ ಲೇಖಕಿ ರೇವತಿಯ ಸ್ವಯಂಪ್ರತಿಭೆಯನ್ನು ಮೆಚ್ಚಬೇಕು.

ತೃತೀಯ ಲಿಂಗಿ ಸಮುದಾಯದ ಪರಿಭಾಷೆಗಳು

ದ್ವಿಲಿಂಗಿಗಳ ಲೋಕದಲ್ಲಿ ಬಳಸುವ ಭಾಷಿಕ ಪದಗಳಿಗಿಂತ ಭಿನ್ನವಾದ ಭಾಷಿಕಪದಗಳ ಬಳಕೆಯಿದೆ. ಈ ಪದಗಳ ನಿಷ್ಪತ್ತಿಯನ್ನು ಕುರಿತಂತೆ ಲೇಖನವನ್ನು ಬರೆಯಬಹುದು. ನಾವು ಕೇಳಿರದ ಆ ಸಮುದಾಯದ ಭಾಷಿಕ ಜಗತ್ತನ್ನು ಲೇಖಕಿ ರೇವತಿ ತಮ್ಮ ಆತ್ಮಕಥೆಯ ಮೂಲಕ ಪರಿಚಯಿಸಿದ್ದಾರೆ.

1. ನಿರ್ವಾಣ: ಎಂದರೆ ಶಿಶ್ನ ತೆಗೆಸುವುದು. ಗಂಡು ಪರಿವರ್ತಿತ ಹೆಣ್ಣಾಗುವಾಗ

ನಡೆಸುವ ಶಸ್ತ್ರಚಿಕಿತ್ಸೆ

2. ಧಂಧಾ ಮತ್ತು ಧಂಧಾಕ್ರಾಂತಾ: ಪರಿಪೂರ್ಣ ಗಂಡಸು ತನ್ನ ಸೆಕ್ಸ್ ಗಾಗಿ ಹಿಜಡಾಗಳ ಬಾಯಿ ಮತ್ತು ಗುದದ್ವಾರದ ಮೂಲಕ ಮಾಡುವ ಸೆಕ್ಸ್ . ಸೆಕ್ಸ್ ಮಾಡುವ ಸ್ಥಳವನ್ನು ಧಂಧಾಕ್ರಾಂತಾ
3. ಪಾಮ್ ಪಡೂತಿ ಮತ್ತು ಜಿಯೋ: ಲಿಂಗಪರಿವರ್ತಿತ ಹಿರಿಯ ಸ್ತ್ರೀಯರನ್ನು ಚೇಲಾಗಳು ಪಾಮ್ ಪಡೂತಿ ಮಾಡುವರು. ಹಿರಿಯರು ಕಿರಿಯರಿಗೆ ಜಿಯೋ ಎಂದು ಆರ್ಶೀವದಿಸುವರು.
4. ಚೇಲಾ: ಮಗಳು. ಹಿಜಡಾ ಸಮುದಾಯಕ್ಕೆ ಸೇರುವ ಕಿರಿಯರು ಹಿರಿಯ ಹಿಜಡಾಗಳ ಚೇಲಾ ಆಗಬೇಕು..ನಂತರದಲ್ಲಿ ನಿರ್ವಾಣ ಪ್ರಕ್ರಿಯೆ. ಸಂಪಾದಿಸಿದ ಹಣವನ್ನು ಗುರುಭಾಯಿಗಳಿಗೆ ಕೊಡಬೇಕು. ತಮಗಿಷ್ಟ ಬಂದವರಿಗೆ ಚೇಲಾಗಳಾಗಬಹುದು.ಚೇಲಾ ಆಗಿ ಸ್ವೀಕರಿಸಲು 5 ರೂಪಾಯಿ ಹಾಗೂ ಜಮಾತ್ ಗೆ 1 .25 ಪೈಸೆ ನೀಡಬೇಕು. ಹೆಣ್ಣಾಗಲು ಚೇಲಾ ಆಗಿ ಗುರುಗಳೊಂದಿಗೆ ಪಳಗಿದ್ದು ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ದಾಸರ ವಾಣಿಯಂತೆ ಆತ್ಮಸಮರ್ಪಣಾಭಾವದೊಂದಿಗೆ ಹಿಜ್ರಾಗಳು ಚೇಲಾಗಳಾಗುವುದು.
5. ಘೋರಿ ಮಾರತ್ : ಮೊದಲ ಸಲ ಚೇಲಾ ಆಗುವುದು.
6. ಜಮಾತ್ : ಹಿಜಡಾಗಳ ಸಂಘದ ಸಭೆ. ಈ ಸಭೆಯಲ್ಲಿ ಚೇಲಾಗಳ ಬದಲಾವಣೆ, ಗುರುಭಾಯಿಗಳ ಆಯ್ಕೆ. ದಂಡು ನೀಡುವುದು ಇತ್ಯಾದಿ.
7. ದಂಡು: ಜಮಾತ್ ಗೆ ನೀಡುವ ಶುಲ್ಕ.
8. ದೀನ್ –ದೀನ್ : ಚೇಲಾ ಸ್ವೀಕಾರದ ಸಂದರ್ಭದಲ್ಲಿ ಒಪ್ಪಿಗೆ ಒಪ್ಪಿಗೆ ಎನ್ನುವುದು.
9. ನಾನಿ: ಅಜ್ಜಿ ಎಂದರೆ ಗುರುವಿನ ಗುರು.
10. ಪೊಟ್ಟೈ : ಹೆಂಗಡಸು ಎಂದರ್ಥ
11. ನಾಥಿ –ಸದಕ್ ನಾಥಿ(ಮಗಳು–ಮೊಮ್ಮಗಳು)
12. ರೀತ್ : ಚೇಲಾ ಆಗಲು ನೀಡುವ ದೀಕ್ಷೆ
13. ಬಡುದಾದಿ : ಮುತ್ತಜ್ಜಿ ಗುರು
14. ದಾದಗುರು: ಅಜ್ಜಿಯ ಗುರು
15. ಗುರು: ತಾಯಿ
16. ಕಾಲಾಗುರು: ಗುರುವಿನ ತಂಗಿ
17. ಗುರುಭಾಯಿ: ಸೋದರಿ, ಹಿರಿಯಕ್ಕ
18. ಚೋಟಾಗುರುಭಾಯಿ: ಕಿರಿಯ ತಂಗಿ

19. ನಾಥಿಚೇಲಾ :ಮೊಮ್ಮಗಳು
20. ಚಂದಿಚೇಲಾ: ಮರಿಮಗಳು
21. ಸಡಕ್ ನಾಥಾ: ಮರಿಮಗಳ ಮಗಳು
22. ಪಂಥಿ: ಗಂಡ
23. ಪೋಥ್ ರಾಜಾಮಾತಾ: ತೃತೀಯಲಿಂಗಿಗಳ ಹೆಣ್ಣುದೇವರು.

ಕೃತಿಯ ಓದಿಗೆ ಈ ಪಾರಿಭಾಷಿಕ ಪದಗಳ ಸಹಾಯವು ಅಗತ್ಯವಾಗಿದೆ. ಈ ಕೃತಿಯ ಓದು ಇತರ ಕೃತಿಯ ಓದಿಗಿಂತ ಭಿನ್ನವಾಗಿದೆ.ತೃತೀಯ ಲಿಂಗಿಗಳ ಅನುಭವದ ದಾರುಣಚಿತ್ರಣೇ ಕೃತಿಯಲ್ಲಿದ್ದು ಈ ವರ್ಗವನ್ನು ನೋಡುವ ದೃಷ್ಟಿಕೋನವನ್ನೇ ಸೃಷ್ಟಿಯ ಎರಡು ಮುಖ್ಯ ವರ್ಗಗಳು ಬದಲಿಸಿಕೊಳ್ಳುವ ಒಂದು ಚಿಂತನಾಕ್ರಮಕ್ಕೆ ದಾರಿಯಾಗುತ್ತದೆ.

**ಆಕರ ಗ್ರಂಥ:**

1. ರೇವತಿ ಎ. ಸರಸ್ವತಿ ದು. (ಅನು). (2011) ಬದುಕು ಬಯಲು. ಲಂಕೇಶ್ ಪ್ರಕಾಶನ. ಬೆಂಗಳೂರು.